ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1515
2. ಸದಸ್ಯರ ಹೆಸರು : ಶ್ರೀ ವೈ.ಎಂ. ಸತೀಶ್
3. ಉತ್ತರಿಸುವ ದಿನಾಂಕ : 10-03-2022.
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರದ ನಾಗರಭಾವಿ ಸರ್ಕಲ್ ಮತ್ತು ಆ ಭಾಗದ ರಿಂಗ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಅನಾಮಿಕರು ಅಲ್ಲಿನ ಜಾಹೀರಾತು (ಅಡ್ವೇರ್‌ಟೆಜ್‌ಮೆಂಟ್ ಬೋರ್ಡ್) ಫಲಕಗಳು ಕಾಣಲು ಮರಗಳನ್ನು ಕಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ, ಮಾಹಿತಿ ನೀಡುವುದು)	ಬಂದಿದೆ.
ಆ	ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು; ಪೊಲೀಸ್ ಕೇಸ್ ದಾಖಲು ಮಾಡಲಾಗಿದೆಯೇ; ಹಾಗಿದ್ದಲ್ಲಿ ಯಾವ ಯಾವ ಸೆಕ್ಷನ್‌ಗಳಡಿ ದಾಖಲಿಸಿಲಾಗಿದೆ. ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆಯೇ; (ಪೂರ್ಣ ವಿವರ ನೀಡುವುದು)	ಬಿ.ಬಿ.ಎಂ.ಪಿ. ಅರಣ್ಯ ಘಟಕದ ಪಶ್ಚಿಮ ವಲಯದಲ್ಲಿ ಅರಣ್ಯ ಮೊಕದ್ದಮೆ ಸಂಖ್ಯೆ: 04/2021-22 ದಿನಾಂಕ: 16-02-2022 ರಂತೆ ಕೇಸು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು 8ನೇ ಎ.ಸಿ.ಎಂ.ಎಂ. ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ.
ಇ	ಈ ರೀತಿ ಯಾವುದೇ ಅನುಮತಿಯನ್ನು ಪಡೆಯದೆ ಮರಗಳನ್ನು ಕಡಿಯಲು ಇಲಾಖೆಯ ಸ್ಥಳೀಯ ಅಧಿಕಾರಿಗಳ ಸಹಕಾರ ಇರುವುದು ಕಂಡು ಬರುತ್ತಿದ್ದು, ಸಹಕರಿಸಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; (ಪೂರ್ಣ ವಿವರ ನೀಡುವುದು)	ಅಕ್ರಮವಾಗಿ ಮರ ಕಡಿಯಲು ಯಾವುದೇ ಸ್ಥಳೀಯ ಅಧಿಕಾರಿಯ ಸಹಕಾರವಿರುವುದು ಕಂಡು ಬಂದಿರುವುದಿಲ್ಲ.

ಸಂಖ್ಯೆ: ನಅಇ 37 ಬಿಬಿಎಸ್ 2022(ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ